**ಆಯುಕ್ತರ ಕಛೇರಿ,**

**ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ**

**(ಸಂಗ್ರಹಣೆ ಮತ್ತು ವಿತರಣೆ ಶಾಖೆ)**

**ದೂರವಾಣಿ ಸಂಖ್ಯೆ: 22354857** E-mail: ddpd.fcs-ka@nic.in

ಸಂಖ್ಯೆ: ಸಿಎಫ್ಎಸ್/ಪಿಡಿ/I/ ಎಫ್‌ಜಿ/03/2020-21 ದಿನಾಂಕ: 15.04.2020

# ಸುತ್ತೋಲೆ

ವಿಷಯ: ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಸ್ವೀಕೃತವಾಗಿರುವ ಅಕ್ಕಿ ಮತ್ತು ತೊಗರಿಬೇಳೆಯನ್ನು ತ್ವರಿತವಾಗಿ ಎತ್ತುವಳಿ ಮಾಡಿ ವಿತರಿಸುವ ಕುರಿತು.

ಉಲ್ಲೇಖ:
1) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 7-1/2019 (ii)-BP.III, dt. 30th March 2020.
2) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: PS-03002/2/2019-PMC, dt. 30th March 2020.

**********

ಉಲ್ಲೇಖ (1) ಕೇಂದ್ರ ಸರ್ಕಾರದ ಪತ್ರದಲ್ಲಿ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯಡಿ ರಾಜ್ಯಕ್ಕೆ ರೆಗ್ಯೂಲರ್ ಎನ್.ಎಫ್.ಎಸ್.ಎ ಹಂಚಿಕೆಯೊಂದಿಗೆ ಕೇಂದ್ರದಿಂದ ಎನ್.ಎಫ್.ಎಸ್.ಎ ಅಡಿ ಗುರುತಿಸಲಾದ ಪ್ರತಿ ಎಎವೈ ಮತ್ತು ಪಿಹೆಚ್‌ಹೆಚ್ ಫಲಾನುಭವಿಗೆ 5 ಕೆ.ಜಿ. ಯಂತೆ ಏಪ್ರಿಲ್, ಮೇ ಮತ್ತು ಜೂನ್ 2020ರ ಮೂರು ಮಾಹೆಗಳಲ್ಲಿ ಉಚಿತವಾಗಿ ಹಂಚಿಕೆ ಮಾಡಲು ಅನುವಾಗುವಂತೆ ಪ್ರತಿ ಮಾಹೆಗೆ 2,00,965 ಮೆ.ಟನ್ ಅಕ್ಕಿಯನ್ನು ಮೂರು ಮಾಹೆಗಳಿಗೆ ಒಟ್ಟು 6,02,895 ಮೆ.ಟನ್ ಅಕ್ಕಿಯನ್ನು ಬಿಡುಗಡೆ ಮಾಡಲಾಗಿರುತ್ತದೆ.

ಅದರಂತೆಯೇ ಉಲ್ಲೇಖ (2) ರನ್ವಯ ಕೇಂದ್ರದಿಂದ ಎನ್.ಎಫ್.ಎಸ್.ಎ ಅಡಿ ಗುರುತಿಸಲಾದ ಪ್ರತಿ ಎಎವೈ ಮತ್ತು ಪಿಹೆಚ್‌ಹೆಚ್ ಪಡಿತರ ಚೀಟಿದಾರರಿಗೆ ಪ್ರತಿ ಮಾಹೆ 1 ಕೆ.ಜಿ. ಯಂತೆ ಏಪ್ರಿಲ್, ಮೇ ಮತ್ತು ಜೂನ್ 2020ರ ಮೂರು ಮಾಹೆಗಳಲ್ಲಿ ಹಂಚಿಕೆ ಮಾಡಲು ಅನುವಾಗುವಂತೆ ತೊಗರಿಬೇಳೆ ಹಂಚಿಕೆ ನೀಡಲಾಗಿರುತ್ತದೆ.

ಮೇಲೆ ವಿವರಿಸಿದ ಪ್ರಮಾಣವನ್ನು ನಿಗಧಿತ ವೇಳಾಪಟ್ಟಿಯಂತೆ ಎತ್ತುವಳಿ ಮಾಡಿ ವಿತರಿಸುವ ಕುರಿತು ಕೆಳಗಿನಂತೆ ಕ್ರಮ ಕೈಗೊಳ್ಳಲು ಸೂಚಿಸಿದೆ.

- ಏಪ್ರಿಲ್ ಮತ್ತು ಮೇ 2020, ಈ ಎರಡು ಮಾಹೆಗಳ ಅಕ್ಕಿ ಪ್ರಮಾಣವನ್ನು ಮೇ 2020ರ ಮಾಹೆಯಲ್ಲಿ ವಿತರಿಸುವುದು. ಹಾಗು ನ್ಯಾಫೆಡ್ ನಿಂದ ಪೂರೈಕೆಯಾಗುವ ತೊಗರಿಬೇಳೆ ಪ್ರಮಾಣಕ್ಕನುಗುಣವಾಗಿ ಮೇ ತಿಂಗಳಿಂದ ತೊಗರಿಬೇಳೆಯನ್ನು ವಿತರಿಸುವುದು.
- ಅಕ್ಕಿ ಪ್ರಮಾಣವನ್ನು ಮೇಲೆ ವಿವರಿಸಿದಂತೆ ಪ್ರತಿ ಎಎವೈ ಮತ್ತು ಪಿಹೆಚ್‌ಹೆಚ್ ಫಲಾನುಭವಿಗೆ 5 ಕೆ.ಜಿ. ಯಂತೆ ಸಂಪೂರ್ಣವಾಗಿ ಉಚಿತವಾಗಿ ವಿತರಿಸುವುದು. ಅದರಂತೆ ಮೇ ಮಾಹೆಯಲ್ಲಿ ಪ್ರತಿ ಎಎವೈ ಮತ್ತು ಪಿಹೆಚ್‌ಹೆಚ್ ಫಲಾನುಭವಿಗೆ 10 ಕೆ.ಜಿ ಅಕ್ಕಿಯನ್ನು ವಿತರಿಸುವುದು.
- ಪ್ರತಿ ಎಎವೈ ಮತ್ತು ಪಿಹೆಚ್‌ಹೆಚ್ ಪಡಿತರ ಚೀಟಿಗೆ ಪ್ರತಿ ತಿಂಗಳಿಗೆ ತಲಾ 1 ಕೆ.ಜಿ. ಯಂತೆ ಏಪ್ರಿಲ್ ಮತ್ತು ಮೇ ಮಾಹೆಯ 2 ಕೆ.ಜಿ. ತೊಗರಿಬೇಳೆ ಪ್ರಮಾಣವನ್ನು ಮೇ ಮಾಹೆಯಲ್ಲಿ ವಿತರಿಸುವುದು. ಆದರೆ ನ್ಯಾಫೆಡ್ ನಿಂದ ತೊಗರಿಬೇಳೆ ನಿಗಧಿತ ಅವಧಿಯೊಳಗಾಗಿ ಒಂದು ತಿಂಗಳ ತೊಗರಿಬೇಳೆ ಪ್ರಮಾಣವನ್ನು ಪೂರೈಕೆ ಮಾಡಿದ್ದಲ್ಲಿ ಮೇ ಮಾಹೆಯಲ್ಲಿ ಪ್ರತಿ ಪಡಿತರ ಚೀಟಿಗೆ 1 ಕೆ.ಜಿ. ಯಂತೆ ತೊಗರಿಬೇಳೆಯನ್ನು ಅಕ್ಕಿಯೊಂದಿಗೆ ವಿತರಿಸುವುದು.

- ಎರಡು ಮಾಹೆಗಳ ಅಕ್ಕಿ ಪ್ರಮಾಣವನ್ನು ಭಾರತ ಆಹಾರ ನಿಗಮದಿಂದ ಏಪ್ರಿಲ್ 23 ರೊಳಗಾಗಿ ಸಗಟು ಗೋದಾಮುಗಳಿಗೆ ಕಡ್ಡಾಯವಾಗಿ ಎತ್ತುವಳಿ ಮಾಡುವುದು. ಇದಕ್ಕೆ ಸಂಬಂಧಿಸಿದಂತೆ ಸಾಗಾಣಿಕೆ ಗುತ್ತಿಗೆದಾರರಿಗೆ ಅಗತ್ಯವಿರುವ ಹೆಚ್ಚುವರಿ ವಾಹನಗಳಿಗೆ ಅಗತ್ಯ ಪರ್ಮಿಟ್‌ಗಳನ್ನು ಹಾಗೂ ಲೋಡಿಂಗ್ ಅನ್‌ಲೋಡಿಂಗ್ ಇತ್ಯಾದಿ ಸಿಬ್ಬಂದಿಗೂ ಕೂಡ ಅಗತ್ಯ ಪರ್ಮಿಟ್‌ಗಳನ್ನು ನೀಡುವುದು.
- ಏಪ್ರಿಲ್ 25ರೊಳಗಾಗಿ ಸಗಟು ಗೋದಾಮುಗಳಿಂದ ಎಲ್ಲಾ ನ್ಯಾಯಬೆಲೆ ಅಂಗಡಿಗಳಿಗೆ ಎತ್ತುವಳಿಯನ್ನು ಪೂರ್ಣಗೊಳಿಸತಕ್ಕದ್ದು.
- ಮೇ ಮಾಹೆಯ ಮೊದಲ ತಾರೀಖಿನಿಂದಲೇ ಪಡಿತರ ಚೀಟಿದಾರರಿಗೆ ಪಿಎಂಜಿಕೆಎವೈ ಅಕ್ಕಿ ಮತ್ತು ಬೇಳೆ ವಿತರಣೆಯನ್ನು ತಪ್ಪದೇ ಆರಂಭಿಸುವುದು.
- ನ್ಯಾಯಬೆಲೆ ಅಂಗಡಿಯವರು ಅಕ್ಕಿಯೊಂದಿಗೆ ತೊಗರಿಬೇಳೆಯನ್ನೂ ಎಲ್ಲಾ ಫಲಾನುಭವಿಗಳಿಗೆ ಕಡ್ಡಾಯವಾಗಿ ವಿತರಿಸುವುದು.
- ಸಗಟು ಗೋದಾಮುಗಳಿಂದ ಅಕ್ಕಿ ಮತ್ತು ತೊಗರಿಬೇಳೆಯನ್ನು ನ್ಯಾಯಬೆಲೆ ಅಂಗಡಿಗೆ ಎತ್ತುವಳಿ ಮಾಡುವಾಗ ನ್ಯಾಯಬೆಲೆ ಅಂಗಡಿಗಳ ಹಂಚಿಕೆ ಪ್ರಮಾಣಕ್ಕನುಗುಣವಾಗಿ ಒಂದಕ್ಕಿಂತ ಹೆಚ್ಚು ಬಾರಿ ಬಿಲ್ ಮಾಡಿಸಿ ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲಿಯೂ ಮೇ 1 ರಿಂದ ಪಡಿತರ ಹಂಚಿಕೆ ಪ್ರಾರಂಭವಾಗುವುದನ್ನು ಖಾತ್ರಿ ಪಡಿಸಿಕೊಳ್ಳುವುದು.
- ಸಗಟು ಗೋದಾಮುಗಳಲ್ಲಿ ಸ್ವೀಕೃತವಾಗುವ ಪಡಿತರ ಅಕ್ಕಿ ಮತ್ತು ತೊಗರಿಬೇಳೆ ಪ್ರಮಾಣದ ಗುಣಮಟ್ಟ ಬಗ್ಗೆ ಕೂಡ ಎಚ್ಚರಿಕೆ ವಹಿಸಿ ಯಾವುದೇ ಕಾರಣಕ್ಕೂ ಕಳಪೆ ಗುಣಮಟ್ಟದ ಪದಾರ್ಥಗಳು ನ್ಯಾಯಬೆಲೆ ಅಂಗಡಿಗಳಿಗೆ ಸರಬರಾಜಾಗುವುದು ಹಾಗೂ ಫಲಾನುಭವಿಗಳಿಗೆ ವಿತರಿಸದಂತೆ ಕ್ರಮ ವಹಿಸಲು ಎಲ್ಲಾ ತರಹದ ಎಚ್ಚರಿಕೆ ವಹಿಸತಕ್ಕದ್ದು.
- ಪ್ರತಿ ದಿನ ಭಾರತ ಆಹಾರ ನಿಗಮದಿಂದ ದಾಸ್ತನು ಎತ್ತುವಳಿ, ನ್ಯಾಯಬೆಲೆ ಅಂಗಡಿಗಳಿಗೆ ಸರಬರಾಜು ಮತ್ತು ಫಲಾನುಭವಿಗಳಿಗೆ ವಿತರಣೆಗಳ ಮಾಹಿತಿಯನ್ನು ನಿಗಧಿತ ನಮೂನೆಯಲ್ಲಿ ಕೇಂದ್ರ ಕಛೇರಿಗೆ ತಪ್ಪದೇ ಒದಗಿಸುವುದು.
- ಈಗಾಗಲೇ ಹಲವು ಬಾರಿ ನೀಡಿರುವ ಮಾರ್ಗಸೂಚಿಗಳಂತೆ ಕರೋನಾ ವೈರಸ್ ತುರ್ತು ಪರಿಸ್ಥಿತಿಯಲ್ಲಿ ಜಾರಿಗೊಳಿಸಿದ್ದು, ಈ ಸಂಬಂಧ ಜಾರಿಯಲ್ಲಿರುವ ನಿಯಮಗಳಾದ ಸಾಮಾಜಿಕ ಅಂತರ, ಸ್ವಚ್ಛತೆ ಇತ್ಯಾದಿ ನಿಬಂಧನೆಗಳನ್ನು ಸಗಟು ಮಳಿಗೆಗಳಲ್ಲಿ ಮತ್ತು ನ್ಯಾಯಬೆಲೆ ಅಂಗಡಿಗಳಲ್ಲಿ ತಪ್ಪದೇ ಪಾಲಿಸುವುದು.
- ಹಂಚಿಕೆ ಮಾಡಲಾದ ಪಡಿತರ ಪದಾರ್ಥಗಳು ಯಾವುದೇ ಕಾರಣಕ್ಕೂ ಮಾರ್ಗಾಂತರವಾಗದಂತೆ ಹಾಗೂ ಫಲಾನುಭವಿಗಳಿಗೆ ತೂಕ ಮತ್ತು ಅಳತೆ ಯಲ್ಲಿ ವ್ಯತ್ಯಾಸವಾಗದಂತೆ ಕ್ರಮ ವಹಿಸುವುದು. ನ್ಯಾಯಬೆಲೆ ಅಂಗಡಿಗಳಲ್ಲಿ ಈ ರೀತಿಯ ನ್ಯೂನ್ಯತೆಗಳ ಕಂಡು ಬಂದಲ್ಲಿ ಅಥವಾ ನ್ಯಾಯಬೆಲೆ ಅಂಗಡಿ ವಿರುದ್ಧ ದೂರು ಸ್ವೀಕೃತವಾದಲ್ಲಿ ಅಂತಹ ನ್ಯಾಯಬೆಲೆ ಅಂಗಡಿಗಳ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳುವುದು.

ಮೇಲಿನ ಎಲ್ಲಾ ಅಂಶಗಳಂತೆ ಕಡ್ಡಾಯವಾಗಿ ಕ್ರಮ ವಹಿಸಿ ಪಡಿತರ ಪದಾರ್ಥಗಳನ್ನು ಪಡೆದುಕೊಳ್ಳುವಲ್ಲಿ ಪಡಿತರ ಚೀಟಿದಾರರಿಗೆ ಯಾವುದೇ ಸಮಸ್ಯೆ ಉಂಟಾಗದಂತೆ ಹಾಗೂ ಯಾವುದೇ ಪಡಿತರ ದುರ್ಬಳಕೆಯಾಗದಂತೆ ಕ್ರಮ ವಹಿಸಲು ಸೂಚಿಸಿದೆ.

8.04.2020.

ಆಯುಕ್ತರು
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ,
ಬೆಂಗಳೂರು.

ಪ್ರತಿಯನ್ನು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಮತ್ತು ಕಾನೂನು ಮಾಪನ ಶಾಸ್ತ್ರ ಇಲಾಖೆ ವಿಕಾಸ ಸೌಧ, ಬೆಂಗಳೂರು.
2. ಮಾನ್ಯ ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಮತ್ತು ಕಾನೂನು ಮಾಪನ ಶಾಸ್ತ್ರ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿಗಳು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ, ಬೆಂಗಳೂರು.

4) ಜಂಟಿ ನಿರ್ದೇಶಕರು (ಸಂ.ವಿ), ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ.
5) ಜಂಟಿ ನಿರ್ದೇಶಕರು (ಐಟಿ), ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ.

4. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
5. ರಾಜ್ಯದ ಎಲ್ಲಾ ಜಂಟಿ/ಉಪನಿರ್ದೇಶಕರುಗಳು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ.
6. ಮುಖ್ಯಲೆಕ್ಕಾಧಿಕಾರಿಗಳು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು.